ಉಪಾಧ್ಯಕ್ಷರು : ಮಾಡಿಕೊಡುತ್ತಾರೆ. ಅವರ ಹತ್ತಿರ ಹೋಗಿ ಚರ್ಚೆ ಮಾಡಿ.

ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ : ಸೇಲಂ ಮಾದರಿಯಲ್ಲಿ ಕೈಮಗ್ಗ ನೇಕಾರರಿಗೆ ವಸತಿ ಸೌಲಭ್ಯವನ್ನು ಮಾಡಿಕೊಡುತ್ತೀರ?

ಶ್ರೀ ಅಪ್ಪಾಸಾಹೇಬ ಮಲ್ಲಪ್ಪ ಪಟ್ಟಣಶೆಟ್ಟಿ : ನಾಲ್ಕು ಜಿಲ್ಲೆಗಳಲ್ಲಿ ಬಜೆಟ್ ಘೋಷಣೆ ಮಾಡಿರುವ ಪ್ರಕಾರ ಯೋಜನೆಯನ್ನು ಕಳುಹಿಸಿಕೊಟ್ಟಿದ್ದು, ಈಗಾಗಲೇ ರಾಜೀವ್ ಗಾಂಧಿ ಹೌಸಿಂಗ್ ಯೋಜನೆಯಲ್ಲಿ 5,000 ಮನೆಗಳನ್ನು ಕಟ್ಟಬೇಕೆಂದು ಆಗಿದ್ದು, ಅಲ್ಲಿ ನೂರು ಮನೆಗಳ ಕಟ್ಟಡ ಕೂಡ ಮುಗಿದಿವೆ. ಇನ್ನು ಉಳಿದಂತಹ ಮನೆಗಳ ಕೆಲಸವನ್ನು ಪ್ರಾರಂಭ ಮಾಡಬೇಕಾಗಿದ್ದು, ಬಾಗಲಕೋಟೆ, ಬಿಜಾಪುರ,ಗದಗ್ ಮತ್ತು ದಾರವಾಡ ಈ ರೀತಿಯಾಗಿ ತೆಗೆದುಕೊಂಡು ರಾಜೀವ್ ಗಾಂಧಿ ಹೌಸಿಂಗ್ ಯೋಜನೆಯಲ್ಲಿ ಕೂಡ ತೆಗೆದುಕೊಳ್ಳಬೇಕೆಂದು ನಿರ್ಧಾರ ಮಾಡಿದೆ. ಅದಕ್ಕೆ 30,000 ರೂಪಾಯಿ shedಗಳನ್ನು ನಿರ್ಮಾಣ ಮಾಡುವುದಕ್ಕೆ ಹಾಗೂ 5,000 ರೂಪಾಯಿ ರಾಜ್ಯಸರ್ಕಾರದ ಬಜೆಟ್ನಿಂದ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದು ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆ. ಅವರು shedಗಳ list ಅನ್ನು ಕಳುಹಿಸಿದ್ದಾರೆ, ಅದನ್ನು ಮಾಡುವಂತಾದ್ದು ಆಗಿದೆ. ಮಾನ್ಯ ಸದಸ್ಯರು ಸೇಲಂ ಮಾದರಿಯಲ್ಲಿ ಮಾಡಬೇಕೆಂದು ಏನು ಹೇಳುತ್ತಿದ್ದಾರೆ, ಅದನ್ನು ನಾನು ತರಿಸಿಕೊಂಡು ಪರಿಶೀಲಿಸಿ ಆ ರೀತಿ ಮಾಡುವಂತೆ ನನ್ನ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚೆ ಮಾಡುತ್ತೇನೆ.

ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ : ನಾವು ಏನು ಹೇಳಿದರೂ ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತೇವೆಂದು ಹೇಳುತ್ತಾರೆ. ಇದರಲ್ಲಿ ರಾಜ್ಯ ಸರ್ಕಾರದ ಪಾತ್ರವೇನು? ಇವರು ಕೇವಲ 35,000 ರೂಪಾಯಿ ಒಂದು ಮನೆಗೆ ಕೊಡುತ್ತಾರೆ. ಅದರಲ್ಲಿ 10,000 ರೂಪಾಯಿ subsidy ಕೊಡುತ್ತಾರೆ. 35,000 ರೂಪಾಯಿಯಲ್ಲಿ ನೇಕಾರರ ಮನೆಯಾಗುವುದಿಲ್ಲ, 50,000 ರೂಪಾಯಿಗೆ ಒಂದು ಮನೆ ಕೊಡಬೇಕು. ಅದಕ್ಕೆ 25,000 subsidy ಕೊಡಬೇಕು. ಇದರಲ್ಲಿ ನಿಮ್ಮ ರಾಜ್ಯ ಸರ್ಕಾರದ ಮಹತ್ವ ಏನೂ ಇಲ್ಲವೇ? ಎಂದು ಕೇಳುತ್ತಿದ್ದೇನೆ.

ಸಣ್ಣ ನೀರಾವರಿ ಯೋಜನೆಗಳು

165 (297) ಶ್ರೀ ನರೇಂದ್ರಬಾಬು ನೆ.ಲ.(ರಾಜಾಜಿನಗರ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಕಳೆದ 3 ವರ್ಷಗಳಿಂದ ರಾಜ್ಯದಲ್ಲಿ ರೈತರ ಪರವಾಗಿ ಸಣ್ಣ ನೀರಾವರಿಗಾಗಿ ಸರ್ಕಾರ ಹಾಕಿಕೊಂಡಿರುವ ಯೋಜನೆಗಳು ಯಾವುವು;

ಆ) ಈ ಯೋಜನೆಗಳಿಂದ ಯಾವ ಯಾವ ಸಣ್ಣ ನೀರಾವರಿ ಯೋಜನೆಗಳನ್ನು ಕಾರ್ಯ ರೂಪಕ್ಕೆ ತರಲಾಗಿದೆ;

ಇ) ಕಳೆದ 3 ವರ್ಷಗಳಿಂದ ಆಗಿರುವ ಖರ್ಚು ಎಷ್ಟು;

ಈ) ರಾಜ್ಯದ ಕೆಲವು ಜಿಲ್ಲೆಗಳನ್ನು ಬರಗಾಲ ಪೀಡಿತ ಜಿಲ್ಲೆಗಳು ಎಂದು ಘೋಷಿಸಿದ್ದರೂ ಆ ಪ್ರದೇಶಗಳಲ್ಲಿ ಸಣ್ಣ ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ತರಲು ಸರ್ಕಾರಕ್ಕೆ ಇರುವ ತೊಡಕುಗಳೂ ಏನು?

ಅ) ಸಣ್ಣ ನೀರಾವರಿ ಇಲಾಖೆಯಲ್ಲಿ ಕಳೆದ 3 ವರ್ಷಗಳಿಂದಲೂ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

1. ಹೊಸ ಕೆರೆಗಳ ನಿರ್ಮಾಣ
2. ಕೆರೆಗಳ ಆಧುನೀಕರಣ
3. ಕೆರೆ ಕಲ್ಯಾಣ
4. ಕೆರೆಗಳ ಜೀರ್ಣೋದ್ಧಾರ ಮತ್ತು ಹೂಳೆತ್ತುವುದು.
5. ಅಣೆಕಟ್ಟು ಮತ್ತು ಬಂದಾರಗಳು
6. ಏತ ನೀರಾವರಿ ಯೋಜನೆ
7. ದುರಸ್ತಿ, ಪುನರುಜ್ಜೀವನ ಮತ್ತು ಜೀರ್ಣೋದ್ಧಾರ (ಕೇಂದ್ರ ಸರ್ಕಾರದ ನೆರವು ಹಾಗೂ ವಿಶ್ವಬ್ಯಾಂಕ್ ನೆರವಿನೊಂದಿಗೆ)
8. ಪ್ರವಾಹ ನಿಯಂತ್ರಣ ಕಾಮಗಾರಿಗಳು.

ಆ) ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಇ) ಕಳೆದ 3 ವರ್ಷಗಳಿಂದ ಆಗಿರುವ ವೆಚ್ಚ 62702.65 ಲಕ್ಷ ರೂ.ಗಳು.

ಈ) ಯಾವುದೇ ತೊಡಕುಗಳು ಇರುವುದಿಲ್ಲ. ಇಲಾಖೆಗೆ ಒದಗಿಸಲಾಗುತ್ತಿರುವ ಅನುದಾನದಲ್ಲಿ ಬರ ಪೀಡಿತ ಪ್ರದೇಶಗಳೂ ಸೇರಿದಂತೆ ನೀರಿನ ಲಭ್ಯತೆಗೆ ಅನುಗುಣವಾಗಿ ಮತ್ತು ತಾಂತ್ರಿಕ ಅವಶ್ಯಕತೆಗೆ ಮೇರೆಗೆ ಸಣ್ಣ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ.

ವಿಧಾನ ಸಭಾ ಸದಸ್ಯರಾದ ಶ್ರೀ ನರೇಂದ್ರಬಾಬು ನೆ.ಲ.ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 297 ಕ್ಕೆ ಅನುಬಂಧ.

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಯೋಜನೆಗಳು	2004–05		2005–06		2006–07		ಒಟ್ಟು	
		ಕಾಮಗಾರಿಗಳ ಸಂಖ್ಯೆ	ವೆಚ್ಚ	ಕಾಮಗಾರಿಗಳ ಸಂಖ್ಯೆ	ವೆಚ್ಚ	ಕಾಮಗಾರಿಗಳ ಸಂಖ್ಯೆ	ವೆಚ್ಚ	ಕಾಮಗಾರಿಗಳ ಸಂಖ್ಯೆ	ವೆಚ್ಚ
1	2	3	5	6	8	9	11	12	14
1	ನೂತನ ಕೆರೆಗಳ ನಿರ್ಮಾಣ	42	2,734.59	56	1,957.41	127	5,286.82	225	9,978.82
2	ಏತ ನೀರಾವರಿ ಯೋಜನೆಗಳು	48	1,029.84	45	912.35	89	1,714.88	182	3,657.07
3	ಬಂದಾರ, ಪಿಕಪ್ ಅಣೆಕಟ್ಟುಗಳು	67	1,938.08	71	3,887.78	269	7,414.11	407	13,239.97
4	ಕೆರೆಗಳ ಅಭಿವೃದ್ಧಿ ಕಾಮಗಾರಿಗಳು	57	1,076.25	68	905.49	702	10,325.78	827	12,307.52
5	ಕೆರೆ ಕಲ್ಯಾಣ	0	691.70	0	269.95	0	0.00	0	961.65
6	ಕೆರೆ ಜೀರ್ಣೋದ್ಧಾರ ಹಾಗೂ	0	102.41	0	100.73	103	186.85	103	389.99
7	ಪ್ರವಾಹ ನಿಯಂತ್ರಣ ಕಾಮಗಾರಿಗಳು	10	283.83	9	478.00	162	783.42	181	1,545.25

8	ಕ್ಷಾರ ಭೂಮಿ ಯೋಜನೆಗಳು	0	0.00	1	16.65	10	49.54	11	66.19
	ಇಲಾಖೆಯ ಯೋಜನೆಗಳ ಒಟ್ಟು	224	7,856.70	250	8,528.36	1,462	25,761.40	1,936	42,146.46
9	ವಿಶ್ವ ಬ್ಯಾಂಕ್ ನೆರವಿನ ಸಮುದಾಯಾಧಾರಿತ ಕೆರೆ ನಿರ್ವಹಣೆ ಯೋಜನೆ		7617.42		7125.90		5812.87		20556.19
	ಒಟ್ಟು								62702.65

ಉಪಾಧ್ಯಕ್ಷರು : ಈಗ ನೆ.ಲ. ನರೇಂದ್ರಬಾಬು ಅವರ ಪರವಾಗಿ ಧ್ರುವನಾರಾಯಣ್ ಪ್ರಶ್ನೆಯನ್ನು ಕೇಳಿ.

ಶ್ರೀ ಆರ್. ಧ್ರುವನಾರಾಯಣ್ : ಮಾನ್ಯ ಉಪಾಧ್ಯಕ್ಷರೆ, ಈ ಬಾರಿ ಸಣ್ಣ ನೀರಾವರಿ ಇಲಾಖೆಗೆ ಹೆಚ್ಚಿನ ಅನುದಾನವನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ನೀಡಿದ್ದಾರೆ. ಆದರೆ ನನ್ನ ಮನವಿ ಇಷ್ಟೆ, ಕೆಲವು ಜಿಲ್ಲೆಗಳಲ್ಲಿ ವಿಶ್ವ ಬ್ಯಾಂಕ್‌ನ ನೆರವಿಲ್ಲದೇ ಕೆರೆಗಳ ಅಭಿವೃದ್ಧಿ ಆಗುತ್ತಿದೆ. ಅದೇ ರೀತಿ ನನ್ನ ಜಿಲ್ಲೆಗೂ ಕೂಡ ವಿಶ್ವ ಬ್ಯಾಂಕ್‌ನ ನೆರವು ಇಲ್ಲ. ಆ ಜಿಲ್ಲೆಗೆ ತಾವು ಹೆಚ್ಚಿನ ಹಣಕಾಸಿನ ಲಭ್ಯತೆಯನ್ನು ಒದಗಿಸಿಕೊಡಬೇಕು. ಡಾ: ನಂಜುಂಡಪ್ಪ ವರದಿ ಪ್ರಕಾರ ಹಿಂದುಳಿದ ಪ್ರದೇಶಗಳಿಗೂ ಕೂಡ ತಾವು ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಬೇಕು. ತಾವು ಕಳೆದ 2006–07ರ ಮಾರ್ಚ್ ತಿಂಗಳಲ್ಲಿ ಏನು ಹಣವನ್ನು ಬಿಡುಗಡೆ ಮಾಡಿದ್ದಿರಿ, ಅಲ್ಲಿ ಇನ್ನೂ ಕೂಡ ಕೆಲಸ ಚಾಲನೆಯಾಗಿಲ್ಲ. ಈಗಾಗಲೇ ಅಲ್ಲಿ ಎಲ್ಲಾ ವಿವರಗಳನ್ನು ಒದಗಿಸಿ, estimate, survey ಮುಗಿದಿದ್ದರೂ ಕೂಡ ಇನ್ನೂ ಕೂಡ ಅಲ್ಲಿ ಕೆಲಸ ಪ್ರಾರಂಭವಾಗಿಲ್ಲ. ಈಗ ಮಳೆ ಪ್ರಾರಂಭವಾಗತಕ್ಕಂಥ ಸಮಯದಲ್ಲಿ ಅಲ್ಲಿ ಕೆಲಸ ಮಾಡುವುದು ಬಹಳ ಕಷ್ಟ ಇದೆ. ಅಧಿಕಾರಿಗಳು ಸರಿಯಾದ ಸಮಯದಲ್ಲಿ ಇದನ್ನು ಎಲ್ಲವನ್ನು ಮಾಡಿದ್ದರೆ ಸರಿಯಾಗುತ್ತಿತ್ತು. ಅದಕ್ಕೆ ದಯಮಾಡಿ ತಾವು ಸೂಚನೆ ಕೊಡಬೇಕು. ತಾವು 2006–07ನೇ ಸಾಲಿನಲ್ಲಿ ತಾವು 257 ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿದ್ದೀರಿ. ಡಾ: ನಂಜುಂಡಪ್ಪ ವರದಿ ಪ್ರಕಾರ ನಮ್ಮ ಚಾಮರಾಜನಗರ ಜಿಲ್ಲೆ ಹಿಂದುಳಿದ ಜಿಲ್ಲೆಯಾಗಿದೆ. ಅದಕ್ಕೆ ಹೆಚ್ಚಿನ ಅನುದಾನವನ್ನು ತಾವು ಕೊಡಬೇಕು. ಈಗಾಗಲೇ ತಾವೇನು ಅನುದಾನವನ್ನು ಕೊಟ್ಟಿದ್ದೀರಿ, ಅದರ ಕೆಲಸ ಕಾರ್ಯಗಳು ತುರ್ತಾಗಿ ಆಗಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ವಿಶ್ವ ಬ್ಯಾಂಕ್ ನೆರವಿನಡಿಯಲ್ಲಿ ಜಲ ಸಂವರ್ಧನೆ ಯೋಜನೆಯಿಂದ 9 ಜಿಲ್ಲೆಗಳಲ್ಲಿ 34 ತಾಲ್ಲೂಕುಗಳಲ್ಲಿ ಸಣ್ಣ ನೀರಾವರಿ ವತಿಯಿಂದ ಜಿಲ್ಲಾ ಪಂಚಾಯತ್‌ನಿಂದ ಕಾಮಗಾರಿಗಳನ್ನು ನಾವು ಮಾಡುತ್ತಿದ್ದೇವೆ. ತಾವು ಹೇಳಿದಂತೆ ಇದು ಇತರ ಜಿಲ್ಲೆಗಳಿಗಳಿಗೂ ಇದರ ವಿಸ್ತರಣೆಯಾಗಬೇಕು. ಅದರಿಂದ ಅನುಕೂಲವಾಗುತ್ತದೆ ಎಂದು ಹೇಳಿದ್ದಾರೆ. ಈಗ ಅವುಗಳನ್ನು ವಿಶ್ವ ಬ್ಯಾಂಕ್ ನೆರವಿನಡಿಯಲ್ಲಿ ಯೋಜನೆಗಳನ್ನು ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆದರೆ ಒಂದು ಮಾತು ಮಾನ್ಯ ಸದಸ್ಯರಿಗೆ ಹೇಳುವುದೇನೆಂದರೆ, ನಾವು ಸಣ್ಣ ನೀರಾವರಿಯಲ್ಲಿ ಸಾಕಷ್ಟು ಹಣವನ್ನು ಖರ್ಚು ಮಾಡುತ್ತಿದ್ದೇವೆ. ಉದಾಹರಣೆಗೆ 2006–07ನೇ ಸಾಲಿನಲ್ಲಿ 421 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. 2007–08ನೇ ಸಾಲಿಗೆ ಸುಮಾರು 713 ಕೋಟಿ ರೂಪಾಯಿ ಹಿಂದಿನ ಕೆಲಸಗಳನ್ನು ಮುಂದುವರೆಸುವುದಕ್ಕೆ

ಕೊಟ್ಟಿದ್ದೇವೆ. ಈಗ ನಾವು ಒಂದೂ ಕೂಡ ಹೊಸದಾಗಿ ಕಾಮಗಾರಿಗಳನ್ನು ಕೊಡುವಂತಹ ಸ್ಥಿತಿಯಲ್ಲಿ ಇಲ್ಲ. ಹೋದ ವರ್ಷದ spill over workಗೆ ನಾವು 713 ಕೋಟಿ ರೂಪಾಯಿ ಇಟ್ಟುಕೊಂಡಿದ್ದೇವೆ. ಈ ವರ್ಷ ಅದನ್ನು ಪೂರ್ಣ ಮಾಡಬೇಕೆಂದು ಸೂಚನೆ ಕೊಟ್ಟಿದ್ದೇವೆ. ವಿಶ್ವ ಬ್ಯಾಂಕ್ ಅಡಿಯಲ್ಲಿ ಇನ್ನು ಉಳಿದಂತಹ ಬೇರೆ ಜಿಲ್ಲೆಗಳಲ್ಲಿ ತೆಗೆದುಕೊಳ್ಳಬೇಕು ಎಂದು ಸಲಹೆ ಏನಿದೆ ಅದನ್ನು ತೆಗೆದುಕೊಳ್ಳುತ್ತೇವೆ. Major Irrigationಗಿಂತ ಸಣ್ಣ ನೀರಾವರಿಯ ಕೆಲಸಕ್ಕೆ ಹೆಚ್ಚು ಒತ್ತು ಕೊಡಬೇಕು, ಕೆರೆ ಕಟ್ಟೆಗಳ ಹೂಳೂ ತೆಗೆಯಬೇಕು ಎನ್ನುವ ವಿಚಾರದಲ್ಲಿ ನನ್ನ ಸಂಪೂರ್ಣ ಸಹಮತವಿದೆ. ಆ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಿ ಇನ್ನೂ ಹೆಚ್ಚು ಹಣವನ್ನು ತೊಡಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಆರ್. ಧ್ರುವನಾರಾಯಣ್ : 2006–07ನೇ ಸಾಲಿಗೆ 257 ಕೋಟಿ ರೂಪಾಯಿ ನಮ್ಮ ಭಾಗಕ್ಕೆ ಏನುಬಿಡುಗಡೆ ಮಾಡಿದ್ದರು. ಕಳೆದ ವರ್ಷ ಕೊಟ್ಟಂತಹ ಕೆಲಸವೇ ಅಲ್ಲಿ ಇನ್ನೂ ಪ್ರಾರಂಭವಾಗಿಲ್ಲ. ಅಲ್ಲಿ ಕೆಲಸ ತತ್‌ಕ್ಷಣ ಪ್ರಾರಂಭವಾಗಬೇಕು. ಡಾ: ನಂಜುಂಡಪ್ಪ ವರದಿ ಪ್ರಕಾರ ಹಿಂದುಳಿದ ಪ್ರದೇಶಗಳು ಏನಿದೆ ಅಲ್ಲಿಗೆ ಹೆಚ್ಚಿನ ಅನುದಾನ ಕೊಡಬೇಕು ಎಂದು ನಾನು ತಮ್ಮಲ್ಲಿ, ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲಿ ಪ್ರಾರಂಭವಾಗಿದೆ. ಇನ್ನೂ ಹೆಚ್ಚು ಕೆಲಸವಾಗಬೇಕು ಎನ್ನುವುದರ ಬಗ್ಗೆ ಮತ್ತು ಈ ಕಾಮಗಾರಿಯನ್ನು ತ್ವರಿತ ಗತಿಯಲ್ಲಿ ಮಾಡಬೇಕು ಎನ್ನುವುದರ ಬಗ್ಗೆ ನಾನು ನಮ್ಮ ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇವೆ. ಈಗ ಮಳೆಗಾಲ ಇದೆ, ಹೋದ ಬಾರಿ ಕೂಡ ಹಣ ದುರುಪಯೋಗವಾಗಬಾರದು ಎಂದು ಮಳೆಗಾಲದಲ್ಲಿ ಯಾವುದೇ ಕೆಲಸವನ್ನು ಮಾಡಲಿಲ್ಲ. ಈಗ ಆ ಕಾಮಗಾರಿಗಳನ್ನು ಮಳೆಗಾಲ ಮುಗಿದ ಮೇಲೆ ತ್ವರಿತಗತಿಯಲ್ಲಿ ಮಾಡುವುದಕ್ಕೆ ಯೋಚನೆ ಮಾಡುತ್ತೇವೆ. ಮಳೆಗಾಲ ಇದ್ದರೂ ಸಹ ಯಾವ್ಯಾವ ಕಾಮಗಾರಿಯನ್ನು ಮಾಡಬೇಕು ಅದರ ಬಗ್ಗೆ ಕೂಡ ಯೋಚನೆ ಮಾಡುತ್ತೇವೆ. ಡಾ: ನಂಜುಂಡಪ್ಪ ವರದಿ ಬಗ್ಗೆ ನಾನು ವಿವರವಾಗಿ ಚರ್ಚೆ ಮಾಡುವುದಕ್ಕೆ ಸಿದ್ದವಿದ್ದೇನೆ. ಅದಕ್ಕೆ ಆದ್ಯತೆ ಮೇಲೆ ಕೊಡುವುದಕ್ಕೆ ನಾನು ಸಿದ್ದವಿದ್ದೇನೆ.

ಶ್ರೀ ಎನ್.ಧರ್ಮಸಿಂಗ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಯವರು ಸಣ್ಣ ನೀರಾವರಿ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ ಡಾ:ಡಿ.ಎಂ. ನಂಜುಂಡಪ್ಪನವರ ವರದಿ ಪ್ರಕಾರ ಆ ಭಾಗಗಳಿಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದಾರೆಂಬ ಬಗ್ಗೆ ಹೇಳಿದ್ದಾರೆ. ಅದು ಸರಾಸರಿ ಎಂದು ಅಲ್ಲ, ನೀವು ಬಂದಾಗ ಎಷ್ಟು ಸಣ್ಣ ನೀರಾವರಿ ಕೆಲಸ ಕಾರ್ಯಗಳನ್ನು ತೆಗೆದುಕೊಂಡಿದ್ದೀರಿ? ಎಷ್ಟು ದುಡ್ಡನ್ನು ಬಿಡುಗಡೆ ಮಾಡಿದ್ದೀರಿ. ಎಲ್ಲೆಲ್ಲಿ ಕೆಲಸ

ಆಗಿದೆಯೆಂಬ ಬಗ್ಗೆ ಒಂದು ನಿರ್ದಿಷ್ಟವಾದ ಉತ್ತರವನ್ನು ಸದನಕ್ಕೆ ಕೊಟ್ಟರೆ, ಸರಿಯಾಗುತ್ತದೆ. ತಾವು ಮೊದಲಿಗಿಂತಲೂ "ಹೆಚ್ಚು ಹಣವನ್ನು ಕೊಟ್ಟಿದ್ದೇವೆ. ಕೆಲಸ ಮಾಡುತ್ತಿದ್ದೇವೆ. ಹಣದ ಕೊರತೆ ಇಲ್ಲ" ಎನ್ನುವಂಥಾ ರೀತಿಯಲ್ಲಿ ಹೇಳುತ್ತಿದ್ದೀರಿ. ಇವತ್ತು ತಾವು ಬಂದ ಮೇಲೆ ರೈತರಿಗೆ ಸಹಾಯವಾಗುವಂಥಾ ರೀತಿಯಲ್ಲಿ ಬೇರೆ ಕಡೆಗೆ, ಎಷ್ಟು ಹಣ ಕೊಟ್ಟಿದ್ದೀರಿ. ಈಗ Major Irrigation projects ಒಂದು ಕಡೆಗೆ ಇದೆ. Dry land ಇದೆ. ಇವತ್ತು 39 ತಾಲ್ಲೂಕುಗಳು ಹಿಂದುಳಿದ ಪ್ರದೇಶಗಳೆಂದು ಡಾ:ಡಿ.ಎಂ.ನಂಜುಂಡಪ್ಪನವರು ಹೇಳಿದ್ದಾರೆ. ಆ ತಾಲ್ಲೂಕುಗಳಿಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೀರಿ? ಎಷ್ಟು ಕೆಲಸ ಕಾರ್ಯಗಳು ಆಗಿವೆಯೆಂಬ ನಿರ್ದಿಷ್ಟವಾದ ಉತ್ತರವನ್ನು ಕೊಟ್ಟರೆ ಸರಿಯಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, 9 ಜಿಲ್ಲೆಗಳ 34 ತಾಲ್ಲೂಕುಗಳಲ್ಲಿ ಸಣ್ಣ ನೀರಾವರಿ ಹಾಗೂ ಜಿಲ್ಲಾ ಪಂಚಾಯತ್‌ನ ಆಯ್ದ ಭಾಗಗಳಲ್ಲಿ 2,005 ಕೆರೆಗಳನ್ನು ಪುನರ್‌ಜ್ಜೀವನಗೊಳಿಸುತ್ತಿದ್ದು, ಕಳೆದ ಮೂರು ವರ್ಷಗಳಿಂದ ಇದಕ್ಕಾಗಿ 205 ಕೋಟಿ 56 ಲಕ್ಷ ರೂಪಾಯಿಗಳು ಖರ್ಚು ಆಗಿದೆ. ಎರಡನೆಯದಾಗಿ ಬರಪೀಡಿತ ಪ್ರದೇಶಗಳ್ಲಿ ಈ ಕಾಮಗಾರಿಯನ್ನು ಕೈಗೊಳ್ಳಲು ಈ ಯೋಜನೆಯಲ್ಲಿ ಬರುವುದಿಲ್ಲ. ಅದಕ್ಕೆ ನಾವು ಬೇರೆ ರೂಪದಲ್ಲಿ ಖರ್ಚು ಮಾಡುತ್ತಿದ್ದೇವೆ. ನಾನು ಅಂಕಿ ಅಂಶಗಳ ಮೂಲಕ ನಿಮಗೆ ಹೇಳುತ್ತಿದ್ದೇನೆ. ಸಣ್ಣ ನೀರಾವರಿ ಇಲಾಖೆಗೆ ಒಟ್ಟಾರೆ ಈ ಇಲಾಖೆಯಿಂದ ಬಹಳ ಕಡಿಮೆ ಪ್ರಮಾಣದಲ್ಲಿ ಹಣ ಖರ್ಚಾಗುತ್ತಿತ್ತು. ಮೂರು ವರ್ಷಗಳಲ್ಲಿ 160–170 ರೂಪಾಯಿಗಳು ಖರ್ಚಾಗಿರಲಿಲ್ಲ. ಹೋದ ವರ್ಷ 2006–07ನೇ ಸಾಲಿನ್ಲಲಿ ಒಟ್ಟಾರೆ ನಾವು 421 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ವರ್ಷ ಒಟ್ಟಾರೆ 713 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಉದಾಹರಣೆಗೆ ನಬಾರ್ಡ್‌ನಿಂದ ಮುಂದುವರೆದ ಕಾಮಗಾರಿಗೆ 120 ಕೋಟಿ ರೂಪಾಯಿಗಳಿಗೆ ಅಲೊಕೇಷನ್ ಮಾಡಿದ್ದೇವೆ. ಈ ವರ್ಷ ಪೂರ್ಣ ಹಣವನ್ನು ಖರ್ಚು ಮಾಡುವುದಕ್ಕೆ ಎಲ್ಲಾ ಪ್ರಯತ್ನವನ್ನು ಮಾಡುತ್ತೇವೆ. ಮತ್ತೆ ಇರುವಂಥಾ ಸಂಪನ್ಮೂಲಗಳನ್ನು ನೋಡಿಕೊಂಡು, ಉಳಿದಂಥಾ ಕಾಮಗಾರಿಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ವಿಶೇಷ ಗಮನವನ್ನು ಕೊಡುತ್ತೇನೆಂಬ ಭರವಸೆಯನ್ನು ನಾನು ಈ ಸದನದಲ್ಲಿ ನಿಮಗೆ ಕೊಡಲಿಚ್ಛಿಸುತ್ತೇನೆ.

ಶ್ರೀ ಬಿ.ಆರ್.ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ನನ್ನದು ಒಂದು ಸಣ್ಣ ಕ್ಲಾರಿಫಿಕೇಶನ್ ಇದೆ. ತಮ್ಮ ಬೇಡಿಕೆ ನಬಾರ್ಡ್‌ಗೆ ಎಷ್ಟು ಹಣವನ್ನು ಒದಗಿಸಿತು? ತಾವು ನಬಾರ್ಡ್ ಮುಖಾಂತರ ಸಣ್ಣ ನೀರಾವರಿ ಎಷ್ಟು ಬೇಡಿಕೆಯನ್ನು ಸಲ್ಲಿಸಿದ್ದೀರಿ? ಆ ಬೇಡಿಕೆಯಲ್ಲಿ ತಮಗೆ ಎಷ್ಟು ಹಣಕಾಸು ತಮ್ಮ ಕೈ ಸೇರಿತು? ಹಣ ಸಿಗದೇ ಹೋದರೆ, ಏಕೆ ಸಿಗಲಿಲ್ಲ? ಇವತ್ತು ಸಣ್ಣ ನೀರಾವರಿ ಇಲಾಖೆ ಅಂತರ್ ಜಲವನ್ನು ಹೆಚ್ಚು ಮಾಡುವುದಕ್ಕೆ ಬಹಳ ಪಾತ್ರವನ್ನು ವಹಿಸುತ್ತದೆ.

ಅದಕ್ಕೆ ತಾವು ಮುತುವರ್ಜಿಯನ್ನು ವಹಿಸಿದ್ದೀರಿ, ಮತ್ತೆ ಕಳೆದ ವರ್ಷ ತಾವು ಏನು ಬಜೆಟ್ ಅನ್ನು ಕೊಟ್ಟಿದ್ದೀರಿ. ತಾವು ಸೆಪ್ಲಿಮೆಂಟರಿ ಬಜೆಟ್‌ನಲ್ಲಿ ದೊಡ್ಡ ಪ್ರಮಾಣದಲ್ಲಿ ಹಣವನ್ನು ಒದಗಿಸಿದ್ದೀರಿ. ಆದರೆ ನಿಜವಾಗಿ ಎಲ್ಲಿ ಹಣದ ಅವಶ್ಯಕತೆ ಇದೆ, ಅಲ್ಲಿಗೆ ಒದಗಿಸಲಿಲ್ಲ. ಎಲ್ಲಿ ಬರಗಾಲವಿದೆ, ಅಲ್ಲಿಗೆ ಒದಗಿಸಲಿಲ್ಲ. ಎಲ್ಲಿ ಅವಶ್ಯಕತೆ ಇದೆ, ಅಲ್ಲಿ ತಾರತಮ್ಯವಾಗಿದೆ. ಅದು ತಮ್ಮ ಗಮನಕ್ಕೆ ಬಂದಿದೆಯಾ? ಅದನ್ನು ತಾವು ಏನಾದರೂ ಸರಿ ಮಾಡುವುದಕ್ಕೆ ತಯಾರಾಗಿ ಇದ್ದೀರಾ?

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ನಾನು ಸಂಪೂರ್ಣ ವಿವರವನ್ನು ಒದಗಿಸುತ್ತೇನೆ. ನಾನು ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ ಕೊಡುವ ಕಾಲದಲ್ಲಿ ಸಂಪೂರ್ಣವಾದ ವಿವರವನ್ನು ಒದಗಿಸುತ್ತೇನೆ. ಜಲಸಂವರ್ಧನೆ ಯೋಜನೆಗೆ ಕೇಂದ್ರ ಸರ್ಕಾರದಿಂದ ವಿಶ್ವ ಬ್ಯಾಂಕ್ ಮೂಲಕ ಬರುವ ಹಣ ಸೇರಿ, ನಾವು ಹೆಚ್ಚು ಖರ್ಚು ಮಾಡುವುದಕ್ಕೆ ವಿಶೇಷ ಪ್ರಯತ್ನವನ್ನು ಮಾಡುತ್ತಿದ್ದೇವೆ, ಆ ಕಡೆಗೆ ಆಗಲಿಲ್ಲ. ಈ ಸಾರಿ ಬೇಡಿಕೆ ನೂರು ಕೋಟಿ ರೂಪಾಯಿಗಳು ಇದೆ. ಹೊಸ ಕೆಲಸಗಳಿಗೆ ಇನ್ನು ಹಣವನ್ನು ಕೊಡುವುದಕ್ಕೆ ಆಗಿಲ್ಲ. ಆದುದರಿಂದ ಬರುವ ದಿವಸಗಳಲ್ಲಿ, ಹೆಚ್ಚು ಸಂಪನ್ಮೂಲವನ್ನು ಕ್ರೋಢೀಕರಿಸಿ, ಈ ಕಡೆಗೆ ವಿಶೇಷ ಗಮನವನ್ನು ಕೊಡುತ್ತೇನೆ. ನಾನು ಉತ್ತರವನ್ನು ಕೊಡುವಂಥಾ ಕಾಲದಲ್ಲಿ ಆದರ ವಿವರಗಳನ್ನು ಕೊಡುತ್ತೇನೆ. ನಾನು ಇಷ್ಟು ಮಾತ್ರ ಹೇಳುತ್ತೇನೆ, ಒಟ್ಟಾರೆ ಸಣ್ಣ ನೀರಾವರಿ ಯೋಜನೆಗೆ ಆದ್ಯತೆಯ ಮೇಲೆ ನಾವು ಖರ್ಚು ಮಾಡುತ್ತಿದ್ದೇವೆ. ನಾವು ವಿಶ್ವ ಬ್ಯಾಂಕ್‌ನ ಮೂಲಕ ಹೆಚ್ಚು ಹಣವನ್ನು ತೆಗೆದುಕೊಳ್ಳವುದಕ್ಕೆ ಪ್ರಯತ್ನ ಮಾಡುತ್ತೇವೆ. ಕಳೆದ 3–4 ವರ್ಷಗಳಿಂದ ನಿಧಾನವಾಗಿದೆ. ಈ ವರ್ಷ ಅದನ್ನು speed up ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬಿ.ಎಸ್. ಯಡಿಯೂರಪ್ಪನವರೆ ಹಣಕಾಸಿನ ಸಚಿವರಾಗಿ, ಅವರೇ ಈ ರಾಜ್ಯಕ್ಕೆ ಬೊಕ್ಕಸದ ಹಣವನ್ನು ಖರ್ಚು ಮಾಡುವವರು. ಆದರೆ ನೀವು ಬೇಡಿದಷ್ಟು ನವಾರ್ಡ್ ಸಬ್ ಕಮಿಟಿಯಲ್ಲಿ ದುಡ್ಡು ಸಿಗದೇ ಹೋಗಿದ್ದರೆ, ಇದು ಬಹಳ ದುಃಖದ ಸಂಗತಿ. ತಾವು ಸಣ್ಣ ನೀರಾವರಿ ಮಂತ್ರಿಯಾಗಿ, ಹಣಕಾಸಿನ ಸಚಿವರಾಗಿ, ನಿಮ್ಮ ಬೇಡಿಕೆ ಎಷ್ಟು ಇದೆ, ಅಷ್ಟು ಸಿಗದೇ ಹೋದರೆ, ಇದು ಬಹಳ ದೊಡ್ಡ ದುರಂತವೆಂದು ನನಗನಿಸುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಈ ವರ್ಷ ನಬಾರ್ಡ್ ಮುಂದುವರೆದ ಕಾಮಗಾರಿಗೆ 120 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಈ ಹಣವನ್ನು ಮೊದಲು ಖರ್ಚು ಮಾಡಲಿ, ನಬಾರ್ಡ್‌ನಿಂದ ಇನ್ನು ಹೆಚ್ಚು ಬೇಡಿಕೆಯನ್ನು ಕೊಟ್ಟು, ಹಣವನ್ನು ತರಿಸುವಂಥಾ ಪ್ರಯತ್ನವನ್ನು

ಮಾಡುತ್ತೇನೆ, ಈ ವರ್ಷ ನಾನು ಇದಕ್ಕೆ ವಿಶೇಷವಾದ ಗಮನವನ್ನು ಕೊಡುತ್ತೇನೆ.

ಗ್ರಾಮದಲ್ಲಿ ಸ್ಮಶಾನ ಭೂಮಿಗೆ ಜಮೀನನ್ನು ಕಾಯ್ದಿರಿಸುವುದು

5 (42) ಶ್ರೀ ಪ್ರಭಾಕರ ಬಂಗೇರ ಕೆ.(ಬೆಳ್ತಂಗಡಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯದ ಪ್ರತಿ ತಾಲ್ಲೂಕಿನ ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಸ್ಮಶಾನಕ್ಕಾಗಿ ಜಮೀನನ್ನು ಕಾಯ್ದಿರಿಸಲಾಗಿದೆಯೇ;

ಆ) ಇನ್ನೂ ಎಷ್ಟು ಗ್ರಾಮ ಪಂಚಾಯತ್ ಗಳಿಗೆ ಸ್ಮ ಶಾನ ಭೂಮಿಯನ್ನು ಕಾಯ್ದಿರಿಸಲು ಬಾಕಿ ಇದೆ; ಈ ಸಂಬಂಧ ಸರ್ಕಾರ ಕೈಗೊಳ್ಳಲಾಗಿರುವ ಸಕಾಲಿಕ ಕ್ರಮಗಳೇನು;

ಇ) ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಹಲವಾರು ಊರುಗಳಲ್ಲಿ ಜನಸಂಖ್ಯೆ ಗಣನೀಯ ಪ್ರಮಾಣದಲ್ಲಿದ್ದು, ಈ ಗ್ರಾಮ ಪಂಚಾಯತ್ ವ್ಯಾಪ್ತಿಯ ಒಂದು ಸ್ಥಳದಲ್ಲಿ ಮಾತ್ರ ಸ್ಮಶಾನ ಭೂಮಿ ವ್ಯವಸ್ಥೆಗೊಳಿಸುವ ಕಾರಣದಿಂದ ಸದರಿ ಗ್ರಾಮದ ದೂರದಲ್ಲಿರುವ ಊರುಗಳ ಜನರು ಈ ಸೌಲಭ್ಯವನ್ನು ಹೊಂದುವಲ್ಲಿ ಅನಾನುಕೂಲ ಉಂಟಾಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ;?

ಈ) ಹೌದಾದಲ್ಲಿ ಅಂಥ ಎಲ್ಲಾ ಊರುಗಳಲ್ಲಿಯೂ ಸ್ಮಶಾನ ಭೂಮಿ ಕಾಯ್ದಿರಿಸಲು ಸರ್ಕಾರ ಕ್ರಮ ಕೈಗೊಳ್ಳವುದೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ರಾಜ್ಯದ ಪ್ರತಿ ತಾಲ್ಲೂಕಿನ ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಸ್ಮಶಾನಕ್ಕಾಗಿ ಜಮೀನನ್ನು ಕಾಯ್ದಿರಿಸಲಾಗುತ್ತದೆ.

ಬೆಂಗಳೂರು ವಿಭಾಗಕ್ಕೆ ಸಂಬಂಧಿಸಿದಂತೆ ಶಿವಮೊಗ್ಗ ಜಿಲ್ಲೆ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಜಮೀನನ್ನು ಕಾಯ್ದಿರಿಸಬೇಕಾಗುತ್ತದೆ. ಉಳಿದ ಕೋಲಾರ, ಚಿತ್ರದುರ್ಗ, ಬೆಂಗಳೂರು ನಗರ ಜಿಲ್ಲೆಗಳಲ್ಲಿ ಸೇರಿದಂತೆ 1138 ಗ್ರಾಮಗಳಲ್ಲಿ ಸ್ಮಶಾನಕ್ಕೆ ಜಮೀನನ್ನು ಕಾಯ್ದಿರಿಸಲಾಗಿದೆ.

ಬೆಳಗಾವಿ ವಿಭಾಗಕ್ಕೆ ಸಂಬಂಧಿಸಿದಂತೆ ಆಯಾ ಗ್ರಾಮ ಪಂಚಾಯಿತಿಗಳಲ್ಲಿ ಲಭ್ಯವಿರುವ ಸರ್ಕಾರಿ ಜಮೀನಿನ ಲಭ್ಯತೆಗೆ ಅನುಗುಣವಾಗಿ ಜಮೀನನ್ನು ಸ್ಮಶಾನಕ್ಕಾಗಿ ಕಾಯ್ದಿರಿಸಲಾಗುತ್ತಿದೆ. ಬೆಳಗಾವಿ ಜಿಲ್ಲೆಯಲ್ಲಿ 776 ಗ್ರಾಮಗಳಿಗೆ ಸ್ಮಶಾನ ಜಾಗವನ್ನು ಕಾಯ್ದಿರಿಸಲಾಗಿದೆ.

ಮೈಸೂರು ವಿಭಾಗದಲ್ಲಿ 2274 ಗ್ರಾಮಗಳಿಗೆ ಸ್ಮಶಾನಕ್ಕಾಗಿ ಜಮೀನನ್ನು ಕಾಯ್ದಿರಿಸಲಾಗಿದೆ.